

# ರವಿವರ್ಮನ ಗುಂಗಿನಲ್ಲಿ ಅಕ್ಷತಾ

■ ಮಾಂಟೊ

‘ಬಾಹುಬಲಿ’ ಸಿನಿಮಾದಲ್ಲಿ ಅನುಷ್ಕಾ ನಿರ್ವಹಿಸಿದಂಥ ಪಾತ್ರ, ‘ಮಣಿಕರ್ಣಿಕಾ’ ಸಿನಿಮಾದಲ್ಲಿ ಕಂಗನಾ ನಿಭಾಯಿಸಿದಂಥ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ಯುವನಟಿ ಅಕ್ಷತಾ ಶ್ರೀನಿವಾಸ್ ಮಹದಾಸೆ. ಕನ್ನಡದಲ್ಲಿ ಆರತಿ, ಕಲ್ಪನಾ, ಮಂಜುಳಾ ಅವರಂಥ ನಟಿಯರು ನಿರ್ವಹಿಸಿದ ಪಾತ್ರಗಳನ್ನು ಅಕ್ಷತಾ ಬೆರಗಿನಿಂದ ನೋಡುತ್ತಾರೆ. ಪೌರಾಣಿಕ ಪಾತ್ರಗಳಲ್ಲಿ ರಾಣಿಯಾಗಿ ಮೆರೆಯಬೇಕು ಎಂಬ ಅವರ ಆಸೆ ಈಗ ಭಾಗಶಃ ಈಡೇರಿದೆ. ಅದು ಸಿನಿಮಾದ ಮೂಲಕ ಅಲ್ಲ, ಫೋಟೊಶೂಟ್ ಮೂಲಕ!

ಮಂಗಳೂರಿನ ಬೆಡಗಿ ಅಕ್ಷತಾ ಇತ್ತೀಚೆಗಿನ ಫೋಟೊಶೂಟ್‌ನಲ್ಲಿ ರಾಜಕುಮಾರಿಯಾಗಿ ಮಿಂಚುತ್ತಿದ್ದಾಳೆ. ರವಿವರ್ಮನ ಕುಂಚದಲ್ಲಿ ರೂಪುಗೊಂಡ ಚೆಲುವೆಯೊಬ್ಬಳು ಜೀವತಳೆದು ಬಂದಿದ್ದಾಳೋ ಎಂಬಂತಿರುವ ಈ ಫೋಟೊಶೂಟ್‌ನ ಪರಿಕಲ್ಪನೆ ಅಕ್ಷತಾ ಅವರದ್ದೇ.

‘ರವಿವರ್ಮನ ಚಿತ್ರಗಳೇ ನಮಗೆ ಸ್ಫೂರ್ತಿ. ಈಗಾಗಲೇ ರವಿವರ್ಮನ ಚಿತ್ರಗಳನ್ನು ಇಟ್ಟುಕೊಂಡು ಹಲವರು ಫೋಟೊಶೂಟ್ ಮಾಡಿದ್ದಾರೆ. ನಾವು ಕಲಾಕೃತಿಗಳಲ್ಲಿ ಇರುವ ಹಾಗೆಯೇ ಸೆಟ್ ಹಾಕಿ ಫೋಟೊಶೂಟ್ ಮಾಡಿದ್ದೇವೆ. ಪೌರಾಣಿಕ ಪಾತ್ರಗಳಲ್ಲಿ ನಟಿಸಬೇಕು ಅನ್ನುವುದು ನನ್ನ ಕನಸು. ಹಾಗಾಗಿಯೇ ಈ ಫೋಟೊಶೂಟ್ ಮಾಡಿದ್ದೇನೆ. ಇದರಿಂದ ನನಗೆ ನನ್ನ ಕನಸಿನ ಪಾತ್ರಗಳಲ್ಲಿ ನಟಿಸುವ ಅವಕಾಶ ಸಿಗುತ್ತದೆ ಎಂಬ ನಂಬಿಕೆ ಇದೆ’ ಎಂದು ಹೇಳುತ್ತಾರೆ ಅಕ್ಷತಾ.

ಫೋಟೊಶೂಟ್‌ಗೆ ವಸ್ತ್ರ ವಿನ್ಯಾಸ ಡ್ರೆಸ್ ಕ್ರಿಸ್ಟಿಯಾನಾ ಮಾಡಿದ್ದಾರೆ. ಛಾಯಾಗ್ರಾಹಕ ಶೆರಿಫ್ ನಂದಿಯಾಳ್. ಪ್ರಸಾಧನ ಪ್ರಣೀತಾ ಅವರದ್ದು. ■

